**ಸಾಕ್ಷಿಯನ್ನು ದಿನಾಂಕ 11.02.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದ**

1 ನೇ ಎದುರುದಾರರಿಗೆ ಕಳುಹಿಸಿದ ದಿಃ27-10-2018 ರ ಪತ್ರವನ್ನು ನಿ.ಆರ್.7 ಎಂದು ಗುರುತಿಸಲಾಯಿತು. ಚೆಕ್ ಅಮಾನ್ಯಗೊಂಡ ಬಗ್ಗೆ 2 ಇಂಟಿಮೇಶನಗಳನ್ನು ನಿ.ಆರ್.8 ಮತ್ತು 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ**

ನಾವು ಲಾರಿ ನಂಬರ್ ಟಿಎನ್-36/ಎಕ್ಯೂ-2557 ಗೆ ಸಂಬಂಧಿಸಿದಂತೆ ಪಾಲಿಸಿ ನೀಡುವಾಗ 1 ನೇ ಎದುರುದಾರರು ಸದರಿ ವಾಹನದ ಮಾಲೀಕರಾಗಿದ್ದರು. ಸದರಿ ಪಾಲಿಸಿ ನೀಡುವ ಸಮಯದಲ್ಲಿ 1 ನೇ ಎದುರುದಾರರು ಪ್ರಿಮಿಯಂ ಹಣಕ್ಕೆ ನೀಡಿದ ಚೆಕ್ ಅಮಾನ್ಯವಾಗಿರಲಿಲ್ಲ ಅಂದರೆ ಸರಿಯಲ್ಲ. ಸದರಿ ಚೆಕ್ ಅನ್ನು 1 ನೇ ಎದುರುದಾರರೇ ನೀಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರರು ಏಜೆನ್ಸಿ ಮೂಲಕ ಚೆಕ್ ಅನ್ನು ನೀಡಿರುವುದಾಗಿ ನುಡಿಯುತ್ತಾರೆ. ಈಗ ನೋಡುತ್ತಿರುವ ನಿ.ಆರ್.2 ಬಾಲಕೃಷ್ಣನ್ ಪಿ ಎನ್ನುವವರ ಹೆಸರಿನಲ್ಲಿರುತ್ತದೆ. ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ 1 ನೇ ಎದುರುದಾರರು ಮತ್ತು ಸದರಿ ಬಾಲಕೃಷ್ಣನ್ ರವರಿಗೆ ನೋಟೀಸ್ ಅನ್ನು ನೀಡಿರುತ್ತೇವೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಎದುರುದಾರರು ಮತ್ತು ಬಾಲಕೃಷ್ಣನರವರಿಗೆ ತಾವು ಯಾವುದೇ ನೋಟೀಸ್ ಅನ್ನು ಕಳುಹಿಸಿರುವುದಿಲ್ಲ ಎನ್ನುತ್ತಾರೆ.

ಅಪಘಾತಪಡಿಸಿತು ಎನ್ನಲಾದ ಲಾರಿಯ ಪಾಲಿಸಿಯ ಅವಧಿ ದಿಃ28-08-2018 ರಿಂದ 27-08-2019 ಆಗಿತ್ತು ಅಂದರೆ ಸರಿ. ವಾಹನದ ಮಾರಾಟವಾದಲ್ಲಿ ಸದರಿ ವಾಹನದ ವಿಮೆ ಮತ್ತು ಆರ್.ಸಿ. ಚಾಲ್ತಿಯಲ್ಲಿದ್ದಲ್ಲಿ ಮಾತ್ರ ಸಂಬಂಧಪಟ್ಟ ಆರ್.ಟಿ.ಓ.ದವರು ವಾಹನದ ಆರ್.ಸಿ. ಬದಲಾವಣೆ ಮಾಡುತ್ತಾರೆ ಅಂದರೆ ಸರಿಯಲ್ಲ. ನಿ.ಆರ್.2 ಮತ್ತು 7 ಕ್ಕೂ 3 ನೇ ಎದುರುದಾರರಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿ.ಆರ್.2 ವಾಹನದ ವಿಮೆಗೆ ಸಂಬಂಧಿಸಿದ್ದು ಎನ್ನುತ್ತಾರೆ.

ನಿ.ಆರ್.2 ರಲ್ಲಿ ನಮೂದಿಸಿದ ಬಾಲಕೃಷ್ಣನರವರು 2 ನೇ ಎದುರುದಾರ ಕಂಪನಿಯ ಅಧೀಕೃತ ಏಜೆಂಟ್ ಆಗಿರುತ್ತಾರೆ ಅಂದರೆ ಸರಿ. ಸದರಿ ಏಜೆಂಟ್ ನಮ್ಮ ಕಂಪನಿಯ ನೌಕರರಾಗಿರುತ್ತಾರೆ ಅಂದರೆ ಸರಿಯಲ್ಲ. ಆ ರೀತಿ ಏಜೆಂಟ್ ಯಾವುದೇ ತಪ್ಪು ಎಸಗಿದಲ್ಲಿ ಅದಕ್ಕೆ ನಮ್ಮ ಕಂಪನಿ ಬಾದ್ಯಸ್ಥ ಅಂದರೆ ಸರಿಯಲ್ಲ. ಸದರಿ ಬಾಲಕೃಷ್ಣನರವರ ವಿರುದ್ಧ ಯಾವುದಾದರೂ ಕಾನೂನುಕ್ರಮ ಜರುಗಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಏಜೆನ್ಸಿಯನ್ನು ರದ್ದುಗೊಳಿಸಿರುವುದಾಗಿ ನುಡಿಯುತ್ತಾರೆ. ಪಾಲಿಸಿಯನ್ನು ಸದರಿ ಏಜೆಂಟ್ ಮೂಲಕ ನೀಡಿರುತ್ತೇವೆ ಅಂದರೆ ಸರಿ. 1 ನೇ ಎದುರುದಾರರು ತಮ್ಮ ವಾಹನಕ್ಕೆ ಸಂಬಂಧಿಸಿದ ಸಂಪೂರ್ಣ ಪ್ರಿಮಿಯಂ ಅನ್ನು ಏಜೆನ್ಸಿ ಮೂಲಕ ನಮಗೆ ಸಂದಾಯ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಚೆಕ್ ಅಮಾನ್ಯಗೊಳ್ಳಲು 1 ನೇ ಎದುರುದಾರರು ಕಾರಣರಲ್ಲ ಅಂದರೆ ಸರಿಯಲ್ಲ. ನಾವು ಸರಿಯಾದ ಕ್ರಮ ಅನುಸರಿಸದೇ ಸಂಬಂಧಪಡದ ವ್ಯಕ್ತಿಗಳಿಗೆ ನೋಟೀಸ್ ನೀಡಿರುತ್ತೇವೆ ಅಂದರೆ ಸರಿಯಲ್ಲ. 2 ನೇ ಎದುರುದಾರರು ಮತ್ತು ನಮ್ಮ ಏಜೆನ್ಸಿ ಅರ್ಜಿದಾರರಿಗೆ ಪರಿಹಾರ ನೀಡಲು ಬಾದ್ಯಸ್ಥರು ಅಂದರೆ ಸರಿಯಲ್ಲ.

ನಿ.ಆರ್.2 ಚೆಕ್ ಅಮಾನ್ಯಗೊಂಡ ಸಂಬಂಧ ಬಾಲಕೃಷ್ಣನರವರೊಂದಿಗಿನ ಏಜೆನ್ಸಿಯನ್ನು ರದ್ದುಪಡಿಸಿರುತ್ತೇವೆ. ನಿ.ಆರ್.2 ಅಮಾನ್ಯಗೊಂಡ ಬಗ್ಗೆ 1ನೇ ಎದುರುದಾರರಿಗೆ ಯಾವುದೇ ಇಂಟಿಮೇಶನ್ ನೀಡಿರುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಮಾಲೀಕರಾದ 3ನೇ ಎದುರುದಾರರಿಗೆ ಮತ್ತು ಸಂಬಂಧಪಟ್ಟ ಆರ್.ಟಿ.ಒ.ದವರಿಗೆ ಇಂಟಿಮೇಶನ್ ನೀಡಿರುವುದಾಗಿ ನುಡಿಯುತ್ತಾರೆ. ಅಪಘಾತ ಕಾಲಕ್ಕೆ ವಿಮೆ ಚಾಲ್ತಿಯಲ್ಲಿ ಇದ್ದುದ್ದರಿಂದ 2ನೇ ಎದುರುದಾರರು ಅರ್ಜಿದಾರರಿಗೆ ಪರಿಹಾರ ನೀಡಲು ಬಾದ್ಯಸ್ಥರು ಅಂದರೆ ಸರಿಯಲ್ಲ. 1ನೇ ಎದುರುದಾರರಿಗೆ ನಾವು ನೋಟೀಸ್ ನೀಡಿದ್ದರೂ ಅವರು ಸ್ಪಂದಿಸಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಆರ್.2 ಅಮಾನ್ಯಗೊಂಡ ಕಾರಣ ಬಾಲಕೃಷ್ಣನರವರೊಂದಿಗಿನ ಏಜೆನ್ಸಿಯನ್ನು ರದ್ದುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ

ಧಾರವಾಡ.